# ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು-560027


ಸಂಖ್ಯೆ: ಕಾ/ರೇರಾ/ರೆವಿನ್ಯೂ/ಸಿಆರ್/20/2020-21 ದಿನಾಂಕ: 15.12.2020

ರವರಿಗೆ:

ಜಿಲ್ಲಾಧಿಕಾರಿಗಳು

ಬೆಂಗಳೂರು ನಗರ ಜಿಲ್ಲೆ

ಬೆಂಗಳೂರು.

ಮಾನ್ಯರೆ,

ವಿಷಯ : ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 2016 ಕಲಂ 40(1) ಹಾಗೂ ರೇರಾ ನಿಯಮ 25 ರಡಿ ದಂಡ/ಪರಿಹಾರದ ಮೊತ್ತವನ್ನು ಕಂದಾಯ ಬಾಕಿ ಎಂದು ವಸೂಲಿಯಾಗಿರುವ ಬಗ್ಗೆ ಮಾಹಿತಿ ನೀಡುವ ಕುರಿತು

ಉಲ್ಲೇಖ 1 ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯ ದಿನಾಂಕ: 05.10.2020.

2. ಈ ಪ್ರಾಧಿಕಾರದ ಪತ್ರ ಸಂಖ್ಯೆ:ಕಾ/ರೇರಾ/ರೆವಿನ್ಯೂ/ಸಿಆರ್/20/2020-21 ದಿನಾಂಕ: 15.10.2020

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಿಯಲ್ ಎಸ್ಟೇಟ್ ಅಭಿವೃದ್ಧಿ ಮತ್ತು ನಿಯಂತ್ರಣ ಕಾಯ್ದೆ 2016 ಸೆಕ್ಷನ್ 40(1) ರನ್ವಯ ಹೊರಡಿಸಲಾದ ರೇರಾ ಆದೇಶಗಳನ್ವಯ ಅಭಿವೃದ್ಧಿದಾರರು/ಪ್ರವರ್ತಕರಿಂದ ದಂಡ/ಪರಿಹಾರ/ಬಡ್ಡಿ ವಸೂಲಿ ಮಾಡುವ ಕುರಿತು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ:05.10.2020 ರಂದು ನಡೆದ ಸಭೆಯ ನಡವಳಿಕೆಯಲ್ಲಿ ತೀರ್ಮಾನಿಸಿದಂತೆ, ರೇರಾ ಪ್ರಾಧಿಕಾರದಿಂದ ವಿಧಿಸಿರುವ ದಂಡ/ಪರಿಹಾರ/ಬಡ್ಡಿಯನ್ನು ಕರ್ನಾಟಕ ಭೂಕಂದಾಯ ಬಾಕಿ ಎಂಬುದಾಗಿ ಪರಿಗಣಿಸಿ, ಅಭಿವೃದ್ಧಿದಾರರು/ಪ್ರವರ್ತಕರಿಂದ ವಸೂಲಿ ಮಾಡಿ ಗ್ರಾಹಕರಿಗೆ ಪಾವತಿಸುವ ಸಲುವಾಗಿ ಅಗತ್ಯ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಲು ಹಾಗೂ ಸಭೆಯಲ್ಲಿ ಚರ್ಚಿಸಲಾದ ಇನ್ನಿತರೆ ವಿಚಾರಗಳಾದ ರೇರಾ ವೆಬ್‌ಪೋರ್ಟಲ್ ಅನ್ನು ಕಂದಾಯ ಇತರೆ ವಸೂಲಾತಿ ವೆಬ್‌ಪೋರ್ಟಲ್‌ಗಳಿಗೆ ಮಿಲನಗೊಳಿಸುವ ಬಗ್ಗೆ ಮತ್ತು ರೇರಾ ಕಾಯ್ದೆಯಡಿ ಬರುವ ಎಲ್ಲಾ ಪತ್ರ ವ್ಯವಹಾರಗಳನ್ನು ಸಕಾಲ ಯೋಜನೆಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ ಸಭೆಯಲ್ಲಿ ಸೂಚಿಸಲಾಗಿತ್ತು. ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಮಾಹಿತಿಯನ್ನು ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಲು ಕೋರಿದೆ.

ಈ ಪ್ರಾಧಿಕಾರದಿಂದ ಉಲ್ಲೇಖ(2)ರಂತೆ ವಸೂಲಾತಿ ವಿಚಾರವಾಗಿ ವಿಶೇಷ ಅಭಿಯಾನದಂತೆ ತಹಸೀಲ್ದಾರ್ ಮತ್ತು ಇತರೆ ಸಿಬ್ಬಂದಿಗಳ ತಂಡ ರಚಿಸಿ ತಮ್ಮ ಕಛೇರಿ ಮತ್ತು ತಮ್ಮ ಜಿಲ್ಲಾ ವ್ಯಾಪ್ತಿಯ ತಾಲ್ಲೂಕು ಕಛೇರಿಗಳಿಗೆ ಪ್ರಗತಿಯ ಪರಿಶೀಲನೆಯ ಬಗ್ಗೆ ನಿಯೋಜಿಸಲಾಗಿತ್ತು. ಅದರಂತೆ ಪ್ರತಿ ಮಾಹೆಯು ಈ ಕೆಳಕಂಡ ನಮೂನೆಯಲ್ಲಿ ನೋಟೀಸ್-37, ನೋಟೀಸ್-40 ಮತ್ತು ಅಂತಿಮ ನೋಟೀಸ್ ಜಾರಿಗೊಳಿಸಿರುವ ಮತ್ತು ಚರಸ್ಥಿರಾಸ್ತಿ ಪತ್ತೆ ಹಚ್ಚಿ ಹರಾಜು ಪ್ರಕ್ರಿಯೆಯ ಹಂತದ ಮಾಹಿತಿಯನ್ನು ನೀಡಲು ಕೋರಿದೆ.

-2

ದೂರವಾಣಿ ಸಂಖ್ಯೆ:080-22249798/ 22249799, ಇ-ಮೇಲ್: info.rera@karnataka.gov.in ವೆಬ್‌ಸೈಟ್: rera.karnataka.gov.in

## ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ.ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು–560027




## ನಮೂನೆ

| ಕ್ರ ಸಂ. | ಜಿಲ್ಲೆಯ ಹೆಸರು | ತಾಲ್ಲೂಕಿನ ಹೆಸರು | ರೇರಾ ಪ್ರಾಧಿಕಾರದಿಂದ ಸ್ವೀಕೃತವಾದ ಆರ್‌ಆರ್‌ಸಿಗಳ ಸಂಖ್ಯೆ ಮತ್ತು ಮೊತ್ತ | ಜಿಲ್ಲಾಧಿಕಾರಿಗಳು ತಹಶೀಲ್ದಾರ್ ರವರಿಗೆ ಹೊರಡಿಸಿದ ರಿಕವರಿ ವಾರೆಂಟ್‌ಗಳ ಸಂಖ್ಯೆ ಮತ್ತು ಮೊತ್ತ | ತಹಶೀಲ್ದಾರ್ ರವರು ವಸೂಲಾತಿ ಸಂಬಂಧ ನೀಡಲಾದ ನೋಟೀಸ್‌ಗಳ ವಿವರ | | | ಚರ–ಸ್ಥಿರಾಸ್ತಿಗಳನ್ನು ಪತ್ತೆ ಹಚ್ಚಿ ಮುಟ್ಟುಗೋಲು ಹಾಕಿಕೊಂಡ ಪ್ರಕರಣಗಳ ಸಂಖ್ಯೆ | ಹರಾಜು ಪ್ರಕ್ರಿಯೆ ನಡೆಸಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ | ತಹಶೀಲ್ದಾರ್ ರವರು ವಸೂಲಿ ಮಾಡಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ | ತಹಶೀಲ್ದಾರ ರವರು ವಸೂಲಿ ಮಾಡಲು ಬಾಕಿ ಇರು ಪ್ರಕರಣಗಳ ಸಂಖ್ಯೆ ಮತ ಮೊತ್ತ |
|---|---|---|---|---|---|---|---|---|---|---|---|
| | | | | | ನಮೂನೆ –37 (ಸಂಖ್ಯೆ) | ನಮೂನೆ –40 (ಸಂಖ್ಯೆ) | ಅಂತಿಮ ನೋಟೀಸ್ (ಸಂಖ್ಯೆ) | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |

ತಮ್ಮ ವಿಶ್ವಾಸಿ,

ಕಾರ್ಯದರ್ಶಿ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ :–**

1. ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು/ಬೆಂಗಳೂರು ದಕ್ಷಿಣ ತಾಲ್ಲೂಕು/ಬೆಂಗಳೂರು ಪೂರ್ವ ತಾಲ್ಲೂಕು/ಯಲಹಂಕ ತಾಲ್ಲೂಕು/ಆನೇಕಲ್ ತಾಲ್ಲೂಕು ರವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ